	1	2	3	4
ಗುಲ್ಬರ್ಗಾ ವಿಭಾಗ				
1.	ಗುಲ್ಬರ್ಗಾ	3,23,200	1,12,800	1,26,000
2.	ಬಳ್ಳಾರಿ	5,64,800	7,200	54,000
3.	ಬೀದರ್	1,34,400	36,000	18,000
4.	ರಾಯಚೂರು	86,400	82,400	–
5.	ಕೊಪ್ಪಳ	1,59,200	7,200	18,000

ವಿಶ್ವೇಶ್ವರ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಬಗ್ಗೆ

2911 (2743) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಮತ್ತು ಹಿಂದಿನ ಉಪಕುಲಪತಿಗಳ ಅವಧಿಯಲ್ಲಿ ಎಷ್ಟು ಸಂದರ್ಭಗಳಲ್ಲಿ ಅಂಕಪಟ್ಟಿಗಳನ್ನು ತಿದ್ದಿರುವುದು ಮತ್ತು ಉತ್ತರ ಪತ್ರಿಕೆಯ ಮೌಲ್ಯಮಾಪನದಲ್ಲಿ ಅಕ್ರಮ ನಡೆದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ, ಇಂತಹ ಅವ್ಯವಹಾರಗಳ ಪ್ರಕರಣಗಳ ಸಂಖ್ಯೆ ಎಷ್ಟು ಹಾಗೂ ಇಂತಹ ಅವ್ಯವಹಾರಗಳಲ್ಲಿ ಭಾಗಿಯಾದ ಅಧಿಕಾರಿಗಳ ವಿರುದ್ಧ ಮೊಕದ್ದಮೆ ಹೂಡಲಾಗಿದೆಯೇ; ಹಾಗಿದ್ದಲ್ಲಿ, ಆ ಮೊಕದ್ದಮೆಗಳು ಈಗ ಯಾವ ಹಂತದಲ್ಲಿವೇ;

ಇ) ಈ ರೀತಿಯ ಅಕ್ರಮಗಳನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಮುನ್ನೆಚ್ಚರಿಕೆಯ ಕ್ರಮಗಳೇನು?

ಡಾ॥ ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು)

ಅ) ಅಂಕಪಟ್ಟಿ ತಿದ್ದಿದ ನಾಲ್ಕು ಪ್ರಕರಣಗಳು ಹಾಗೂ ಉತ್ತರ ಪತ್ರಿಕೆಯ ಮೌಲ್ಯಮಾಪನದಲ್ಲಿ ಅಕ್ರಮ ನಡೆದಿರುವ ನಾಲ್ಕು ಪ್ರಕರಣಗಳು ಪ್ರಸ್ತುತ ಉಪಕುಲಪತಿಯವರ ಅವಧಿಯಲ್ಲಿ ಬೆಳಕಿಗೆ ಬಂದಿವೆ.

ಆ) ಅಂಕಪಟ್ಟಿ ತಿದ್ದಿದ ಮೂರು ಪ್ರಕರಣಗಳು ಮತ್ತು ಗಣಕಯಂತ್ರದ ಮೂಲಕ ತಿದ್ದಿದ ಒಂದು ಪ್ರಕರಣ ಹಾಗೂ ಉತ್ತರ ಪತ್ರಿಕೆಯ ಮೌಲ್ಯಮಾಪನದಲ್ಲಿ ಅಕ್ರಮ ನಡೆದಿರುವ ನಾಲ್ಕು ಪ್ರಕರಣಗಳು ಪತ್ತೆಯಾಗಿರುವುದಾಗಿ ಇತ್ತೀಚೆಗೆ ವಿಶ್ವವಿದ್ಯಾಲಯ ವರದಿ ಮಾಡಿದೆ. ಮೊಕದ್ದಮೆ ಹೂಡಲಾಗಿಲ್ಲ. ಆದರೆ ಭಾಗಿಯಾಗಿದ್ದ ಮೂರು ಜನ ವಿಶ್ವವಿದ್ಯಾಲಯದ ನೌಕರರನ್ನು ಕೆಲಸದಿಂದ ವಜಾ ಮಾಡಲಾಗಿದೆ. ವಿದ್ಯಾರ್ಥಿಗಳ ಫಲಿತಾಂಶವನ್ನು ಹಿಂದಕ್ಕೆ ಪಡೆಯಲಾಗಿದೆ. ಸಂಯೋಜಿತ ಕಾಲೇಜುಗಳ ನಾಲ್ಕು ಅದ್ಯಾಪಕರನ್ನು ಖಾಯಂ ಆಗಿ ವಿಶ್ವ ವಿದ್ಯಾಲಯದ ಗೌಪ್ಯ ಕೆಲಸದಿಂದ ಹೊರಗಿಡಲಾಗಿದೆ.

ಇ) ವಿಶ್ವವಿದ್ಯಾಲಯ ಈ ಕೆಳಕಂಡ ಸುರಕ್ಷತ ಕ್ರಮಗಳನ್ನು ಅಳವಡಿಸಿಕೊಂಡಿದೆ.

1. Malpractice Committee ಯನ್ನು ರಚಿಸಲಾಗಿದೆ.
2. ಅಂಕಪಟ್ಟಿ ಸಿದ್ಧತೆಯ ಕಾರ್ಯ ವಿಧಾನದಲ್ಲಿ ಸುರಕ್ಷತ ಕ್ರಮಗಳನ್ನು ಅಳವಡಿಸಲಾಗಿದೆ.
3. ಪ್ರತಿಯೊಂದು ಹಂತದಲ್ಲಿ ಮೇಲ್ವಿಚಾರಣೆಗೆ ಹಾಗೂ ಪರಿಶೀಲನೆ ಮಾಡಲಾಗುತ್ತಿದೆ.